ಫಾರೆಸ್ಟ್ ಇಲಾಖಾ.

ಇಸ್ತಿಹಾರ್

ತಾರೀಖು 26ನೆ ಫೆಬ್ರವರಿ 1907.

ಬೆಂಗಳೂರು ಸಿಟಿ ಲೀಟ್ ದಿವಾ ಕೃಷ್ಣಮನಾಯಿಶರವರ ಕೋಲಾಲಾಜ್ಲೆಂಬ ಬಂಗ್ಲೆಯಲ್ಲಿ, ಹಾಲಿ ಇರುವ ಮೈಸೂರು ಸೀಮೆಯ ಫಾರೆಸ್ಟು ಕ್ಷಸರ್‌ವೇಟರ್ ಸಾಹೇಬರವರ ಆಫೀಸು ಕಂಪೌಂಡಿನಲ್ಲಿ ಮಾರ್ಚಿ 23ನೆ ತಾರೀಖು ಶನಿವಾರ ಮಧ್ಯಾಹ್ನ 12 ಘಂಟೆಗೆ ಇದರಡಿ ಕಂಡ ಸಾಮಾನುಗಳು ಹರಾಜು ಹಾಕಲ್ಪಡುವವು :—

ಹರಾಜು ಷರತ್ತುಗಳು.

ಚಡ ಸವಾಲಾರನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಸವಾಲ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದರೆ ಸದರಿ ಮಾಲು ದುಸರ ಹರಾಜು ಮಾಡಲ್ಪಡುತ್ತೆ. ಇದರಿಂದ ಉಂಟಾಗುವ ನಷ್ಟಕ್ಕೆ ಮೊದಲನೆ ಹರಾಜಿನ ಚಡ ಸವಾಲ್ದಾರನು ಬದ್ಧನಾಗಿರುವನು. ಅದರಿಂದ ಏನಾದರೂ ಫಾಯಿದೆ ಉಂಟಾದರೆ ಸದರಿ ಮೊದಲಿನ ಹರಾಜಿನ ಚಡ ಸವಾಲ್ದಾರನಿಗೆ ಯಾವ ಬಾಧ್ಯತೆಯೂ ಇರುವದಿಲ್ಲ.

ಹರಾಜಿನಲ್ಲಿ ಪಡೆದ ಮಾಲನ್ನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಸಾಗಿಸಿಕೊಂಡುಹೋಗತಕ್ಕದ್ದು.

ಸಾಮಾನುಗಳ ಪೆಡ್ಯೂಲ್.

2	ದೊಡ್ಡ ಜೇರಗಳು.	9	ಡಾವುಟಗಳು.
1	ಬಿಜೋಬಾ.	1	ಲಾಂದ್ರ.
1	ಸ್ಲೀಪಿಂಗ್ ಪಾಲ್.		

ಎಂ. ಮುತ್ತಣ್ಣ,
ಕ್ಷಸರ್‌ವೇಟರ್ ಆಫ್ ಫಾರೆಸ್ಟ್ಸ್.

ಮೈಸೂರು ಡಿಸ್ಟ್ರಿಕ್ಟು

ಇಸ್ತಿಹಾರ್.

ತಾರೀಖು 15ನೆ ಫೆಬ್ರವರಿ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಸಬಾ ನರಸೀಪುರದ ಹೋಬಳಿಗೆ ಸೇರಿದ ಜೋಡಿ ಹೊನ್ನೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಏಪ್ರೆಲ್ ಮಾಹೆ 3ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 28ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 61—62ನೆ ಪೇಜುಗಳನ್ನು ನೋಡತಕ್ಕದ್ದು.

ತಾರೀಖು 15ನೆ ಫೆಬ್ರವರಿ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲ್ಕಾಡು ಹೋಬಳಿಗೆ ಸೇರಿದ ಕಾಯಂಗುತ್ತಾ ಮೇಗಡಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾವ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಏಪ್ರೆಲ್ ಮಾಹೆ 3ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 28ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 60—61ನೆ ಪೇಜುಗಳನ್ನು ನೋಡತಕ್ಕದ್ದು.

ತಾರೀಖು 15ನೆ ಫೆಬ್ರವರಿ 1907.

ನಾಗಮಂಗಲ ತಾಲ್ಲೂಕು ನೆಲ್ಲಿಗೆರೆ ಹೋಬಳಿಗೆ ಸೇರಿದ ಜೋಡಿ ದೊಡ್ಡಾಪಟ್ಟ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ದೊಡ್ಡಾಪಟ್ಟ ಗ್ರಾಮದಲ್ಲಿ 1907ನೆ ಏಪ್ರೆಲ್ ಮಾಹೆ 2ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 28ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 59—60ನೆ ಪೇಜುಗಳನ್ನು ನೋಡತಕ್ಕದ್ದು.

ಟಿ. ಜೆ. ಸುಂದರರಾಜ್ಯಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು

ಇಸ್ತಿಹಾರ್.

ತಾರೀಖು 9ನೆ ಫೆಬ್ರವರಿ 1907.

ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಬಲ್ಲೂರುಪುರದ ಜೋಡಿ ಗ್ರಾಮವು ಜೋಡಿದಾರ್ರು ನರಸಿಹ್ಮಪಟ್ಟ ವಗೈರೇರಿಂದ ಬರತಕ್ಕ ಬಾಕಿಗಾಗಿ 1907ನೆ ಇಸವಿ ಏಪ್ರೆಲ್ ತಾರೀಖು 8ನೆ ಸೋಮವಾರ ದಿವಸ ದಿವಿ 11 ಘಂಟೆಗೆ ಆಲೂರು ಮೊಕ್ತಾಂನಲ್ಲಿ ಹರಾಜು ಮಾಡಿಸುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟು ಇರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 21ನೆ ಮರ್ಕುಂ ಮೈಸೂರು ಗೆಜೆಟ್ ಪಾರ್ಟ್ II ನೆ ಭಾಗದ 55—56ನೆ ಪುಟಗಳನ್ನು ನೋಡತಕ್ಕದ್ದು.

ಟಿ. ಧರ್ಮರಾಜು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.